**ದಿನಾಂಕ: 16-03-2023 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**:ಪಾಟೀ ಸವಾಲುಃ 2 ಮತ್ತು 13 ನೇ ಪ್ರತಿವಾದಿ ಪರ ಶ್ರೀ.ಸಿ.ಪಿ.ಜೆ ವಕೀಲರಿಂದ:**

ಒಟ್ಟು ಮೂರು ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಲಾಗಿರುತ್ತದೆ. ಆ ಜಮೀನುಗಳ ಸರ್ವೇ ನಂಬರ 708 ವಿಸ್ತೀರ್ಣ 5 ಎಕರೆ 4 ಗುಂಟೆ, ಸರ್ವೇ ನಂಬರ 216/1 ವಿಸ್ತೀರ್ಣ 3 ಎಕರೆ 24

ಗುಂಟೆ, ಸರ್ವೇ ನಂಬರ 216/2 ವಿಸ್ತೀರ್ಣ 3 ಎಕರೆ 21 ಗುಂಟೆ, ಸರ್ವೇ ನಂಬರ 201/6 ವಿಸ್ತೀರ್ಣ 2 ಎಕರೆ 7 ಗುಂಟೆ ಜಮೀನು ಆಗಿರುತ್ತದೆ. ಸರ್ವೇ ನಂಬರ 708 ವಿಸ್ತೀರ್ಣ 5 ಎಕರೆ 4 ಗುಂಟೆ ಜಮೀನು ಜೈಲಿಂಗಪ್ಪನ ಹೆಸರಿನಲ್ಲಿ ಇರುತ್ತದೆ. ಸರ್ವೇ ನಂಬರ 201/6 ರ ಆಸ್ತಿ ಈಗ ಯಾರ ಹೆಸರಿನಲ್ಲಿದೆ ಎಂಬುದು ನನಗೆ ನೆನಪಿಲ್ಲ. ಸರ್ವೇ ನಂಬರ 708 ಮತ್ತು 216/2 ರ ಆಸ್ತಿ ಮೊದಲು ಜೈಲಿಂಗಪ್ಪನ ಹೆಸರಿನಲ್ಲಿದ್ದು, ಈಗ ಪ್ರತಿವಾದಿ 3 ರಿಂದ 5ರವರ ಹೆಸರಿನಲ್ಲಿವೆ. ಆ ಆಸ್ತಿಗಳು 1993 ರ ವಾಟ್ನಿ ಪ್ರಕಾರ ಜೈಲಿಂಗಪ್ಪನ ಹೆಸರಿಗೆ ಬಂದವು ಎಂದರೆ ಸರಿ. ಉಳಿದ ದಾವಾ ಆಸ್ತಿಗಳು ಈಗ ಯಾರ ಹೆಸರಿನಲ್ಲಿವೆ ಎಂಬುದು ನನಗೆ ಗೊತ್ತಿಲ್ಲ. ಸರ್ವೇ ನಂಬರ 216/2 ಮತ್ತು 201/6 ರ ಆಸ್ತಿಗಳು ಈಗ 2 ನೇ ಪ್ರತಿವಾದಿಯ ಹೆಸರಿಲ್ಲಿವೆ ಎಂದರೆ ನನಗೆ ಗೊತ್ತಿಲ್ಲ. ಈ ಎರಡು ಜಮೀನುಗಳು 1993 ರ ವಾಟ್ನಿ ಪ್ರಕಾರ 2 ನೇ ಪ್ರತಿವಾದಿಯ ಹೆಸರಿಗೆ ಬಂದಿರುತ್ತವೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳನ್ನು ಹೊರತುಪಡಿಸಿ ಇನ್ನು ಕೆಲವು ಆಸ್ತಿಗಳು ನಮ್ಮ ಕುಟುಂಬಕ್ಕೆ ಸೇರಿದ ಆಸ್ತಿಗಳಿವೆ ಎಂದರೆ ಸಾಕ್ಷಿಯು ನಮ್ಮ ಅಜ್ಜನ ಆಸ್ತಿಗಳನ್ನು ಮಾತ್ರ ಈ ದಾವೆಯಲ್ಲಿ ಸೇರಿಸಿರುತ್ತೇನೆ. ಉಳಿದ ಆಸ್ತಿಗಳ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ಸ್ವತಃ ನುಡಿಯುತ್ತಾರೆ. ನಮ್ಮ ಕುಟುಂಬಕ್ಕೆ ಸರ್ವೇ ನಂಬರ 175 ಮತ್ತು 159 ರ ಆಸ್ತಿಗಳಿವೆ ಎಂದರೆ ಸಾಕ್ಷಿಯು ಈ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ಸ್ವತಃ ನುಡಿಯುತ್ತಾರೆ. ದಾವಾ ಆಸ್ತಿಗಳು ಸರ್ವೇ ನಂಬರ 175 ಮತ್ತು 159 ಮತ್ತು ನಮ್ಮ ಕುಟುಂಬದ ಮನೆದಳದ ಆಸ್ತಿಗಳಲ್ಲಿ 1993 ರಂದು ವಾಟ್ನಿಯಾಗಿರುತ್ತದೆ ಎಂದರೆ ಸರಿಯಲ್ಲ. ನಮ್ಮ ಕುಟುಂಬದ ಉಳಿದ ಆಸ್ತಿಗಳಲ್ಲಿ 1993ರಂದು ಆದ ವಾಟ್ನಿಯಂತೆ ಇನ್ನು ಕೆಲವು ಆಸ್ತಿಗಳಿದ್ದು, ಅವುಗಳನ್ನು ಈ ದಾವೆಯಲ್ಲಿ ಸೇರಿಸಲು ನನಗೆ ಮಾಹಿತಿ ಇಲ್ಲ ಆದರೆ ನಮ್ಮ ವಕೀಲರಿಗೆ ಗೊತ್ತು ಎಂದು ಸ್ವತಃ ನುಡಿಯುತ್ತಾರೆ. 1993 ರ ವಾಟ್ನಿ ಪ್ರಕಾರ ಸರ್ವೇ ನಂಬರ 175/2 ರ 9 ಎಕರೆ ಜಮೀನಿನ ಪೈಕಿ ದಕ್ಷಿಣ ದಿಕ್ಕಿನಲ್ಲಿ 4 ಎಕರೆ 3 ಗುಂಟೆ ಜಮೀನು 1 ನೇ ಪ್ರತಿವಾದಿಯ ಹೆಸರಿಗೆ ಬಂದಿದೆ ಎಂದರೆ ನನಗೆ ಗೊತ್ತಿಲ್ಲ. ಆ 4 ಎಕರೆ 3 ಗುಂಟೆ ಜಮೀನು 1 ನೇ ಪ್ರತಿವಾದಿ ಮೃತಪಟ್ಟ ನಂತರ ನನಗೆ ಸೇರತಕ್ಕದ್ದು ಎಂದು 1993ರ ವಾಟ್ನಿ ಪತ್ರದಲ್ಲಿ ಬರೆಯಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಸರ್ವೇ ನಂಬರ 175/2ರ ಜಮೀನನ್ನು ಈ ದಾವೆಯಲ್ಲಿ ಸೇರಿಸಲು ನನಗೆ ಯಾವುದೇ ತೊಂದರೆ ಇಲ್ಲ.

ಈ ದಾವೆಯಲ್ಲಿ ಒಂದು ಮನೆ ಮತ್ತು ರೈಸ್ ಮಿಲ್ ಅನ್ನು ಸೇರಿಸಿರುತ್ತೇನೆ. ವಿಪಿಸಿ ನಂಬರ 1(ಎ) ರಿಂದ 1(ಸಿ) ರ ಆಸ್ತಿಗಳನು ಈ ದಾವೆಯಲ್ಲಿ ಸೇರಿಸಿರುತೇನೆ. ವಿಪಿಸಿ ನಂಬರ 1 ಎ ರ ಆಸ್ತಿ

1 ನೇ ಪ್ರತಿವಾದಿ ಮತ್ತು ಜೈಲಿಂಗಪ್ಪನ ಹೆಸರಿನಲ್ಲಿದೆ. ವಿಪಿಸಿ ನಂಬರ 1 ಬಿ ರ ಆಸ್ತಿ 1 ನೇ ಪ್ರತಿವಾದಿ ಮತ್ತು ಜೈಲಿಂಗಪ್ಪನ ಹೆಸರಿನಲ್ಲಿದೆ. ವಿಪಿಸಿ ನಂಬರ 1 ಬಿ ಆಸ್ತಿ 1 ನೇ ಪ್ರತಿವಾದಿ ಮತ್ತು ನನ್ನ ಅಣ್ಣ ಜೈಲಿಂಗಪ್ಪನ ಹೆಸರಿನಲ್ಲಿದೆ. ದಾವಾ ಆಸ್ತಿಗಳನ್ನು ಹೊರತುಪಡಿಸಿ ನಮ್ಮ ಮನೆತನಕ್ಕೆ ಬೇರೆ ಯಾವುದೇ ಮನದಳದ ಆಸ್ತಿಗಳು ಇರುವುದಿಲ್ಲ. ಈಗ ತೋರುತ್ತಿರುವ ಕರ ಆಕರಣೆ ಯಾದಿ ಬೆಳಗಾಲಪೇಟೆಯ ವಿಪಿಸಿ ನಂಬರ 1 ಕ್ಕೆ ಸಂಬಂದಪಟ್ಟ ದಾಖಲೆ ಎಂದರೆ ಸರಿ. ಅದು ನಿ ಪಿ 1 ಎಂದು ಗುರುತಿಸಲಾಯಿತು. ಈಗ ತೋರುತ್ತಿರುವ ವಿಪಿಸಿ ಆಸ್ತಿ ನಂಬರ 393/ಬ ರ ಆಸ್ತಿಯ ದಾಖಲೆಯು ಕರ ಆಕರಣೆ ಯಾದಿ ನಮ್ಮ ಕುಟುಂಬಕ್ಕೆ ಸಂಬಂಧಿಸಿದ್ದು ಎಂದರೆ ಸರಿಯಲ್ಲ. ಈ ಆಸ್ತಿ ನನ್ನ ತಂದೆಯ ಹೆಸರಿನಲ್ಲಿದೆ ಎಂದರೆ ಸರಿ. ಆ ಆಸ್ತಿಯು ನಮ್ಮ ಕುಟುಂಬಕ್ಕೆ ಸೇರಿದ ಆಸ್ತಿ ಎಂದರೆ ಸರಿ. ಈ ಆಸ್ತಿಯನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ವಿಪಿಸಿ ನಂಬರ 393/ಬ ಹಾಗೂ ವಿಪಿಸಿ ನಂಬರ 1 ಬಿ ರ ಆಸ್ತಿಗಳಲ್ಲಿ 1993 ರ ವಾಟ್ನಿಯಲ್ಲಿ ಹಿಸ್ಸೆ ಆಗಿದೆ ಎಂದರೆ ಸರಿಯಲ್ಲ. ನಮ್ಮ ಕುಟುಂಬದ ಎಲ್ಲಾ ಆಸ್ತಿಗಳಲ್ಲಿ 1993 ರಂದು ವಾಟ್ನಿಯಾಗಿರುತ್ತದೆ ಎಂದರೆ ಸರಿಯಲ್ಲ.

(**ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು** )

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಹಾನಗಲ್

ಸಾಕ್ಷಿದಾರರ ಸಹಿ